**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>**

**<u>Spl.C. (NDPS) 9./2020</u>**

ಸಾಕ್ಷಿದಾರರ ಹೆಸರು : ವಿನೋದ್ ಜಿ

ತಂದೆಯ/ಗಂಡನ ಹೆಸರು : ಗೋವಿಂದ ಸ್ವಾಮಿ ಬಿ ಎಸ್

ವಯಸ್ಸು : 49 ವರ್ಷ

ಉದ್ಯೋಗ : Senior Scientific Officer, RFSL, Davanagere

ವಾಸ ಸ್ಥಳ : Davanagere

ಪಿ.ಡಬ್ಲ್ಯೂ 7

ಸಿ.ಡಬ್ಲ್ಯೂ 15

ದಿ: 22-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

1. ನಾನು 2014 ರಿಂದ ಇಲ್ಲಿಯತನಕ ಹಿರಿಯ ವೈಜ್ಞಾನಿಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕಃ 03.05.2021 ರಂದು ರವಿ ಕೆ ರವರಿಂದ 3 ವಸ್ತುಗಳನ್ನು ವಿಶ್ಲೇಷಣೆಗಾಗಿ ಸ್ವೀಕರಿಸಿರುತ್ತೇನೆ. ಸದರಿ ವಸ್ತುಗಳ ಮೇಲೆ ಇರುವಂತಹ ಸೀಲುಗಳು ಸುಸ್ಥಿತಿಯಲ್ಲಿ ಇತ್ತು.

(ಎ) 1 ನೇ ವಸ್ತು 50 ಗ್ರಾಂ ಗಾಂಜಾ ವುಳ್ಳ ಪೊಟ್ಟಣ

(ಬಿ ) 2 ನೇ ವಸ್ತು 50 ಗ್ರಾಂ ಗಾಂಜಾ ವುಳ್ಳ ಪೊಟ್ಟಣ

(ಸಿ) 3 ನೇ ವಸ್ತು 30 ಗ್ರಾಂ ಗಾಂಜಾ ವುಳ್ಳ ಪೊಟ್ಟಣ

ಈ ಮೂರು ವಸ್ತುಗಳಳಿಗೆ ನಾನು ಕೆಮಿಕಲ್ ಅನಾಲಿಸೀಸ್ ಮಾಡಿದಾಗ 1 ರಿಂದ 3 ವಸ್ತುಗಳಲ್ಲಿ ಗಾಂಜಾ ಇರುವುದು ಕಂಡು ಬಂದಿತ್ತು. ಆ ವಸ್ತುಗಳಲ್ಲಿ Psychoactive Constituents ಇರುವುದು ಕಂಡುಬಂದಿರುತ್ತದೆ. ಆ ಮೂರು ವಸ್ತುಗಳನ್ನು ವಿಶ್ಲೇಷಣೆ ಆದ ನಂತರ ತನಿಖಾದಿಕಾರಿಯವರಿಗೆ ಹಿಂದಿರುಗಿಸಿರುತ್ತೇನೆ. ನಾನು ನೀಡಿದ ವರದಿ ಈಗ ನೋಡುತ್ತಿದ್ದು ಅದನ್ನು ನಿ.ಪಿ.-20 ಎಂದು ಅದರಲ್ಲಿನ ನನ್ನ ಸಹಿಯನ್ನು ನಿ.ಪಿ.- 20(ಎ) ಎಂದು ಗುರುತಿಸಲಾಯಿತು. ವಿಶ್ಲೇಷಣೆಗೊಳಪಡಿಸಿದ ವಸ್ತುಗಳನ್ನು ಈಗ ನೋಡುತ್ತಿದ್ದು ಅವುಗಳು ಎಂ ಒ 5 ರಿಂದ 7 ಇರುತ್ತವೆ. ಮಾದರಿ ಸೀಲು ಈಗ ನೋಡುತ್ತಿದ್ದು ಅದನ್ನು ನಿ.ಪಿ.- 21 ಎಂದು ಅದರಲ್ಲಿನ ನನ್ನ ಸಹಿಯನ್ನು ನಿ.ಪಿ.- 21(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ .KK ರವರು LADC ಪರ ವಕೀಲರಿಂದ 3 ನೇ ಆರೋಪಿತರ ಪರವಾಗಿ**:

2. ನಿ.ಪಿ.- 20 ರಲ್ಲಿ ದಿನಾಂಕ 30.09.2021 ಎಂದು ನಮೂದಾಗಿದೆ ಎಂದರೆ ನಿಜ. ನಿ.ಪಿ.- ವರದಿಯಲ್ಲಿ ನಾನು 12.10.2021 ರಂದು ಸಹಿ ಮಾಡಿದ್ದು ಮತ್ತು ಡಿ ಡಿ ರವರು ಸಹಿ ಮಾಡಿದ ದಿನಾಂಕಃ 18.10.2021 ರಂದು ಸಹಿ ಮಾಡಿರುತ್ತಾರೆ ಎಂದರೆ ನಿಜ. ರೆಫೆರೆನ್ಸ್ ದಿನಾಂಕಃ 23.09.2020 ಎಂದು ಇದೆ ಎಂದರೆ ನಿಜ. ಲ್ಯಾಬ್ ನಲ್ಲಿ ಪರೀಕ್ಷೆ ಮಾಡಲು ದಿನಾಂಕಃ 03.05.2021 ಇರುತ್ತದೆ ಎಂದರೆ ನಿಜ. examination analysis ಗೆ ನಾನು ದಿನಾಂಕಃ 16.09.2020-2021 ಇರುತ್ತದೆ ಅಂತ ಹೇಳಿರುತ್ತಾರೆ. ಆ ವಸ್ತುಗಳನ್ನು ನಮ್ಮ ಕಚೇರಿಯಲ್ಲಿ ಸ್ವೀಕರಿಸಿದ ನಂತರ ಅದಕ್ಕೆ ವಿಶ್ಲೇಷಣೆ ಸುಮಾರು 7 ತಿಂಗಳ ನಂತರ ಆಗಿದೆ ಎಂದರೆ ಆ ಅವಧಿಯಲ್ಲಿ ಯಾರ ವಶದಲ್ಲಿ ಇರುತತದೆ ಎಂದರೆ ನಮ್ಮ ಕಚೇರಿಯಲ್ಲಿ ಇರುತ್ತದೆ ಅದಕ್ಕೆ ನಾನು ಚೈನ್ ಆಫ್ ಕಸ್ಟಡಿ ಕೊಟ್ಟಿಲ್ಲ ಎನ್ನುತ್ತಾರೆ. ಆ ಮಾದರಿ ಗಾಂಜಾ ಯಾರ ಸುಪರ್ಧಿಯಲ್ಲಿ ಇತ್ತು ಎಂದು ಹೇಳಲು ಬರುವುದಿಲ್ಲ ಎಂದರೆ ನಿಜ. ಪರೀಕ್ಷೆಗೆ ತೆಗೆದುಕೊಂಡ ಸ್ಯಾಂಪಲ್ ನಲ್ಲಿ ಎಷ್ಟು

ಕಾಂಡ ಹೂವು ಮತ್ತು ಬೀಜ ಇತ್ತು ಅಂತ ಪ್ರತ್ಯೇಕವಾಗಿ ಅನಾಲೀಸಿಸ್ ಮಾಡಿರುವುದಿಲ್ಲ. ಗಾಂಜಾ ಎಷ್ಟು ಹಳೇಯದು ಅಂತ ನನಗೆ ಮಾಹಿತಿ ಇಲ್ಲ. ಆ ಗಾಂಜಾ ದಿನ ಕಳೆದಂತೆ ಗಾಂಜಾದ ಅಂಶ ನಾಶವಾಗುತ್ತದೆ ಎಂದರೆ ಸರಿಯಲ್ಲ. ನಾನು ಕೆಮಿಕಲ್ ಎಕ್ಸ್ ಪರ್ಟ್ ಆಗಿದ್ದು, ಬೊಟ್ಯಾನಿಕಲ್ ಎಕ್ಸ್ ಪರ್ಟ್ ಇರುವುದಿಲ್ಲ. Article NO.3 ರಲ್ಲಿ ಮೊದಲಿನ ತೂಕ 28.75 ಗ್ರಾಂ ಇದ್ದು, ವಿಶ್ಲೇಷಣೆ ನಂತರ ಅದರ ತೂಕ 24.03 ಗ್ರಾಂ ಇದ್ದು, ಮಾದರಿಗಾಗಿ 4.67 ಗ್ರಾಂ ತೆಗೆದುಕೊಂಡಿದ್ದು ಎಂದರೆ ನಿಜ. ಇದರಿಂದ ವಿಶ್ಲೇಷಣೆ ಮಾಡುವ ಪೂರ್ವ ಮತ್ತು ನಂತಇರದಲ್ಲಿ ಗಾಂಜಾ ಎಂಬುದಾಗಿ ಹೇಲುವ ವಸ್ತುಗೆ 0.5 ಗ್ರಾಂ ವ್ಯತ್ಯಾಸ ಕಂಡು ಬರುತ್ತದೆ ಎಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಅದು typographical error ಎನ್ನುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ವಿಶ್ಲೇಷಣೆಗೆ ತೆಗದುಕೊಂಡ ಮಾದರಿ ನಾಶವಾಗುತ್ತದೆ. ಆದರೆ ವರದಿಯಲ್ಲಿ ನಾವು ಬರೆಯುವಾಗ ಕೋರಿಕೆ ಪತ್ರದಲ್ಲಿ ಕಾಣಿಸಿರುವ ತೂಕದ ರೆಫೆರೆನ್ಸ್ ಹಾಕಿ ಅಬಿಪ್ರಾಯ ನೀಡಿರುತ್ತೇವೆ. ನಾನು ಯಾವುದೇ ಗಾಂಜಾವನ್ನು ಅನಾಲೀಸ್ ಮಾಡಿಲ್ಲ, ಪೋಲೀಸರ ಕೋರಿಕೆ ಮೇರೆಗೆ ನಾನು ಈ ರೀತಿ ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 1 ಮತ್ತು 2 ನೇ ಆರೋಪಿಪರ ವಕೀಲರಾದ SML ರವರಿಂದಃ- 3 ನೇ ಆರೋಪಿತರು ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.